2017 ಕ.ತೀ.ವ. 1771

## ಸನ್ಮಾನ್ಯ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ ಮತ್ತು ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ರವಿ ಮಳಿಮಠ

## ಮೆ॥ ಅಭಿಮಾನಿ ಪಬ್ಲಿಕೇಷನ್ಸ್ ಲಿ. ಮತ್ತು ಇನ್ನೊಬ್ಬರು –ವಿರುದ್ಧ– ಕರ್ನಾಟಕ ರಾಜ್ಯ, (ಹೆಚ್ಚುವರಿ ಪ್ರಧಾನ ಕಾರ್ಯದರ್ಶಿಯವರಿಂದ ಪ್ರತಿನಿಧಿತ, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ) ಮತ್ತು ಇತರರು*

ಭಾರತ ಸಂವಿಧಾನದ 226 ಮತ್ತು 227ನೇ ಅನುಚ್ಛೇದಗಳಡಿಯಲ್ಲಿ ರಿಟ್ ಅರ್ಜಿ.

ಮೈಸೂರು ಅರಣ್ಯ ಕಾಯಿದೆ, 1900 ಸೆಕ್ಷನ್ 35.

ಅರಣ್ಯ ಕಾಯಿದೆ ಸೆಕ್ಷನ್ 35 ರ ಅಡಿ ಜಿಲ್ಲಾ ಅರಣ್ಯಗಳಿಗೆ ನಿಯಮಗಳನ್ನು ಮಾಡುವ ಅಧಿಕಾರವನ್ನು ಅಧಿಕಾರಿಗಳಿಗೆ ನೀಡಲಾಗಿದೆ. ಮೈಸೂರು ಅರಣ್ಯ ಕಾಯಿದೆಯಡಿ ಕಿರು ಅರಣ್ಯ ಕುರಿತು ಉಲ್ಲೇಖವಿರುವುದಿಲ್ಲ. ಸೆಕ್ಷನ್ 2(11) ರಾಜ್ಯ ಅರಣ್ಯ ಮತ್ತು ಸೆಕ್ಷನ್ 2(12) ಹಳ್ಳಗಾಡು ಅರಣ್ಯ, ಸೆಕ್ಷನ್ 2(13) ಜಿಲ್ಲಾ ಅರಣ್ಯ ಎಂದು ವಿವರಿಸುತ್ತವೆ. ಆದರೆ ಕಿರು ಅರಣ್ಯವೆಂಬ ಉಲ್ಲೇಖವಿರುವದಿಲ್ಲ.

ಅರಣ್ಯ ಕಾಯಿದೆ ಸೆಕ್ಷನ್ 35 (vii) ದ ಅಡಿ ರಾಜ್ಯ ಸರ್ಕಾರವು ಅರಣ್ಯದಲ್ಲಿ ಕಲ್ಲುಗಣಿಗಾರಿಕೆ, ಕಲ್ಲಿದ್ದಲ್ಲು ಅಥವಾ ಸುಣ್ಣ ಸುಡುವಿಕೆ, ಅದಿರನ್ನು ಕುದಿಸುವಿಕೆ ಅಥವಾ ಕಾಚು ಕರಗಿಸುವಿಕೆ ಇತ್ಯಾದಿಗಳನ್ನು ನಿರ್ಬಂಧಿಸುವ ಅಧಿಕಾರವನ್ನು ಹೊಂದಿದೆ.

ಪ್ರಸ್ತುತ ಪ್ರಕರಣದಲ್ಲಿ ಸರ್ವೆ ನಂ. 16 ನ್ನು ಅರಣ್ಯ ಜಮೀನು ಅಲ್ಲವೆಂಬ ನ್ಯಾಯಿಕ ಘೋಷಣೆಯನ್ನು ಅರ್ಜಿದಾರನು ಹೊಂದಿರುತ್ತಾನೆ. ಆದ್ದರಿಂದ ಪುನರೀಕ್ಷಣಾ

* ರಿಟ್ ಅಪೀಲು ಸಂ. 51325–51326/2015 (ಜಿಎಂ–ಎಂಎಂ–ಎಸ್),
ದಿನಾಂಕ: 22ನೇ ಜನವರಿ, 2016.

**ಪ್ರಾಧಿಕಾರದ ಆದೇಶವನ್ನು ರದ್ದುಗೊಳಿಸಿ, ಉಪನಿರ್ದೇಶಕರು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ತುಮಕೂರು ಇವರ ಆದೇಶವನ್ನು ಪುರಸ್ಕರಿಸಿ, ರಿಟ್ ಅರ್ಜಿಗಳನ್ನು ತೀರ್ಮಾನಿಸಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆ:*** ***ಪ್ಯಾರಾದಲ್ಲಿ***

1. *ರಿಟ್ ಅರ್ಜಿ ಸಂ: 4649/2007, ದಿ: 12ನೇ ಜೂನ್ 2009*
   *ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಮತ್ತು ಇತರರು*
   *–ವಿರುದ್ಧ– ಕರ್ನಾಟಕ ಸರ್ಕಾರ ಮತ್ತು ಇತರರು (ಉಲ್ಲೇ) 19*

ಅರ್ಜಿದಾರರ ಪರವಾಗಿ : ಶ್ರೀ ಎಂ.ಎಸ್. ರಾಜೇಂದ್ರ, ವಕೀಲರು ಮತ್ತು
ಶ್ರೀ ವಿವೇಕ ಹೊಳ್ಳ, ವಕೀಲರು ಇವರ ಪರವಾಗಿ
ಶ್ರೀ ಉದಯ ಹೊಳ್ಳ, ಹಿರಿಯ ವಕೀಲರು ;
ಪ್ರತ್ಯರ್ಜಿದಾರರ ಪರವಾಗಿ : ಶ್ರೀ ವೈ.ಹೆಚ್. ವಿಜಯ್ ಕುಮಾರ್, ಎಜಿಎ.

## ಆಜ್ಞೆ

**ಹಂಗಾಮಿ ಮುಖ್ಯ ನ್ಯಾಯಮೂರ್ತಿ ಶ್ರೀ ಸುಭ್ರೊ ಕಮಲ್ ಮುಖರ್ಜಿ:**

ಈ ಅರ್ಜಿಗಳನ್ನು, ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತುಮಕೂರು ಇವರು ಮಾಡಿದ ಆದೇಶ ದಿನಾಂಕ ಸೆಪ್ಟೆಂಬರ್ 2, 2015ನ್ನು ರದ್ದುಪಡಿಸುವುದಕ್ಕೆ ಈ ನ್ಯಾಯಾಲಯದ ರಿಟ್ ಅಧಿಕಾರ ವ್ಯಾಪ್ತಿಯನ್ನು ಕೋರಿ ದಾಖಲುಮಾಡಿದ್ದಾರೆ. ಈ ರಿಟ್ ಅರ್ಜಿಗಳಲ್ಲಿನ ಅನುಬಂಧ–ಕೆ ಯಲ್ಲಿರುವಂತೆ ಜಂಟಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಮೈಸೂರು ಇವರು ಪುನರೀಕ್ಷಣಾ ಅರ್ಜಿ ಸಂ.222/2015 ರಲ್ಲಿರುವಂತೆ ದೃಢೀಕರಿಸಿದ್ದಾರೆ.

2. ಪ್ರಶ್ನಿತ ಆದೇಶಗಳ ಮೂಲಕ, ಅಧಿಕಾರಿಗಳು, ಸಣ್ಣ ಅರಣ್ಯ ಪ್ರದೇಶದಲ್ಲಿರುವ ಸ್ವತ್ತುಗಳಾಗಿವೆಯೆಂಬ ಪೂರ್ವಪಕ್ಷದ ಮೇಲೆ 1ನೇ ಅರ್ಜಿದಾರನ ಕಲ್ಲುಗಣಿ ಪರವಾನಗಿಯನ್ನು ರದ್ದುಪಡಿಸಿದ್ದಾರೆ.

3. ಮಾನ್ಯ ಹೆಚ್ಚುವರಿ ಸರ್ಕಾರಿ ವಕೀಲರಾದ ಶ್ರೀ ವೈ.ಹೆಚ್. ವಿಜಯ್ ಕುಮಾರ್ ರವರು, ಕೇಂದ್ರ ಸರ್ಕಾರದದಿಂದ ನಿರಾಕ್ಷೇಪಣೆಯನ್ನು ಪಡೆದುಕೊಳ್ಳದ ಹೊರತು, ಅರಣ್ಯ ಪ್ರದೇಶದಲ್ಲಿ ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು ನಡೆಸಲಾಗದೆಂದು ದೃಢವಾಗಿ ವಾದಿಸಿದ್ದಾರೆ.

4. ಅರಣ್ಯ ಪ್ರದೇಶದಲ್ಲಿ, ಯಾವುದೇ ಅರಣ್ಯೇತರ ಚಟುವಟಿಕೆಗಳನ್ನು, ಕೇಂದ್ರ ಸರ್ಕಾರದ ಸಮ್ಮತಿಯಿಲ್ಲದೇ ಕೈಗೊಳ್ಳಲಾಗದೆಂಬ ಶ್ರೀ. ವೈ.ಹೆಚ್. ವಿಜಯ್ ಕುಮಾರ್ ರವರ ವಾದವನ್ನು ನಾವು ಅಂಗೀಕರಿಸಿದ್ದೇವೆ. ಏನೇ ಆದಾಗ್ಯೂ, ಈ ಪ್ರಕರಣದಲ್ಲಿ ಒಳಗೊಂಡಿರುವ ಪ್ರಶ್ನೆಯು, ಸಂಬಂಧ ಪಟ್ಟ ಪ್ರದೇಶ, ಅರಣ್ಯ ಭೂಮಿಯಾಗಿದೆಯೇ ಅಥವಾ ಇಲ್ಲವೇ ಎಂಬುದಾಗಿದೆ.

5. ಕಾನೂನಿನ ಪ್ರಶ್ನೆಗೆ ನಾವು ನಿಷ್ಕರಾಗುವ ಮುನ್ನ ಸಣ್ಣ ಸಣ್ಣ ಸಂಗತಿಗಳ ಬಗ್ಗೆ ವ್ಯವಹರಿಸುವುದು ಅಗತ್ಯವಾಗಿದೆ.

6. ಪ್ರಸ್ತುತ ಭೂಮಿಯು, ಸುಮಾರು 71 ಎಕರೆಗಳು, 21 ಗುಂಟೆಗಳ ವಿಸ್ತೀರ್ಣವುಳ್ಳದ್ದಾಗಿರುವ ಪುಲ್ಲಸಂದ್ರ ಗ್ರಾಮ, ಗೂಳೂರು ಹೋಬಳಿ, ತುಮಕೂರು ತಾಲ್ಲೂಕಿನ ಸರ್ವೇ ನಂ.16 ರ ಭಾಗವಾಗಿದೆ. ಪಹಣಿಗಳಲ್ಲಿರುವಂತೆ, ಆ ಭೂಮಿಯನ್ನು, ಹುಲ್ಲುಗಾವಲೆಂದು ಘೋಷಿಸಲಾಗಿದ್ದು, ಗೋಮಾಳ ಭೂಮಿಯಾಗಿದೆ. 1994 ರ ಸಮಯದಲ್ಲಿ, ರಾಜ್ಯ ಸರ್ಕಾರವು, ಸಾರ್ವಜನಿಕ ಉದ್ದೇಶಕ್ಕಾಗಿ ಆ ಭೂಮಿಯು ಅಗತ್ಯವಾಗಿದ್ದಲ್ಲಿ, ಅದನ್ನು ಕಂದಾಯ ಇಲಾಖೆಯಿಂದ ಹಿಂದಕ್ಕೆ ಪಡೆಯತಕ್ಕದ್ದೆಂಬ ನಿರ್ದಿಷ್ಟ ಷರತ್ತಿನೊಂದಿಗೆ, ಭೂ ಬ್ಯಾಂಕ್ ಅನ್ನು ರಚನೆ ಮಾಡುವುದಕ್ಕಾಗಿ, ಸಿ ಮತ್ತು ಡಿ ಎಂಬ ಪ್ರವರ್ಗಗಳಾಗಿ ವಿವರಿಸಿರುವ ಸುಮಾರು 1,31,861.61 ಹೆಕ್ಟೇರುಗಳಷ್ಟು ಬಂಜರು ಭೂಮಿಯನ್ನು ಅರಣ್ಯ ಇಲಾಖೆಗೆ ವರ್ಗಾಯಿಸಿತು. ತದನಂತರ, ಅದರಲ್ಲಿ ಪರಂತು, ಅರಣ್ಯ ಪ್ರದೇಶವನ್ನು, ಗಣಿಗಾರಿಕೆಗಾಗಿ ಬಿಡುಗಡೆ ಮಾಡಿದ್ದರೆ, ಈ ಭೂ ಬ್ಯಾಂಕಿನಿಂದ ಕೆಲವು ಭೂಮಿಗಳನ್ನು, ಕಾಡನ್ನು ಬೆಳೆಸುವುದಕ್ಕಾಗಿ ಬಿಡುಗಡೆಗೊಳಿಸಲಾಗಿದೆ.

7. ಸಾಮಾನ್ಯ ಕಟ್ಟಡದ ಕಲ್ಲು ತೆಗೆಯುವುದಕ್ಕಾಗಿ ಐದು ವರ್ಷಗಳ ಅವಧಿಗಾಗಿ ಸದರಿ ಸರ್ವೇ ನಂ.16 ರಲ್ಲಿರುವ ಭೂಮಿಯ 4 ಎಕರೆಗಳ ಸಂಬಂಧದಲ್ಲಿ ಶ್ರೀ ಎಂ.ಸಿ. ರಾಮಯ್ಯ ಎಂಬುವವರು ಕಲ್ಲುಗಣಿ ಪರವಾನಗಿಯನ್ನು ಪಡೆದುಕೊಂಡಿದ್ದಾರೆ. ಒಪ್ಪಿತವಾಗಿರುವಂತೆ, ಕಲ್ಲುಗಣಿಗಾರಿಕೆ ಕಾರ್ಯಾಚರಣೆಯನ್ನು ಮಾಡುತ್ತಿರುತ್ತಾರೆ. ಹೇಗೆ ಆದಾಗ್ಯೂ, ಗುತ್ತಿಗೆ ಅವಧಿಯು ಮುಗಿದಿರುತ್ತದೆ.

8. 1ನೇ ಪ್ರತ್ಯರ್ಜಿದಾರನು, ನಮ್ಮ ಮುಂದೆ ಆಗಸ್ಟ್ 31, 2010 ರಂದು, ಸಾಮಾನ್ಯ ಕಟ್ಟಡ ಕಲ್ಲುಗಣಿಗಾರಿಕೆಗಾಗಿ ಶ್ರೀ ಎಂ.ಸಿ. ರಾಮಯ್ಯರಿಗೆ ಗುತ್ತಿಗೆ ನೀಡಲಾಗಿದ್ದ ಅದೇ 3 ಎಕರೆಗಳ ಭೂಮಿಯ ಸಂಬಂಧದಲ್ಲಿ ಕಲ್ಲು ಗಣಿಗಾರಿಕೆ ಗುತ್ತಿಗೆಗಾಗಿ ಹೊಸದಾಗಿ ಅರ್ಜಿ ಸಲ್ಲಿಸಿದ್ದಾನೆ.

9. ಸರ್ವೇ ನಂ. 16 ರಲ್ಲಿರುವ ಭೂಮಿಯ ಸದರಿ 3 ಎಕರೆಗಳಲ್ಲಿ ಕಲ್ಲುಗಣಿ ಪರವಾನಗಿಯನ್ನು ನೀಡುವುದಕ್ಕೆ ಸಂಬಂಧಪಟ್ಟಂತೆ, ಜಂಟೀ ಸ್ಥಳ ಪರಿಶೀಲನೆ ನಡೆಸಿದ ತರುವಾಯ, ಉಪ–ವಿಭಾಗಾಧಿಕಾರಿಗಳು, ತುಮಕೂರು ಉಪ–ವಿಭಾಗ, ತುಮಕೂರು ಇವರಿಂದ ಸಲ್ಲಿಸಲಾದ ವರದಿಯ ಬಗ್ಗೆ ನಮ್ಮ ಗಮನ ಸೆಳೆಯಲಾಗಿದೆ. ವರದಿಯು, ಈ ರಿಟ್ ಅರ್ಜಿಗಳ ಅನುಬಂಧ–ಬಿ ನಲ್ಲಿರುತ್ತದೆ. ಆ ಭೂಮಿಯು ಪೂರ್ಣಕಲ್ಲುಗಳು ಮತ್ತು ಕಲ್ಲುಗುಂಡುಗಳನ್ನು ಹೊಂದಿರುತ್ತದೆಯೆಂದು ಮತ್ತು ಗೋಮಾಳ ಭೂಮಿಯ ಲಕ್ಷಣಗಳು ಕಂಡುಬರುವುದಿಲ್ಲವೆಂದು ವರದಿಮಾಡಿದ್ದಾರೆ. ಆದ್ದರಿಂದ ಅದನ್ನು, ಕೃಷಿ ಚಟುವಟಿಕೆಗಳಿಗಾಗಿ ಉಪಯೋಗಿಸಿ ಕೊಳ್ಳಲು ಸಮರ್ಥವಾಗಿರುವುದಿಲ್ಲ. ಆತನು ಹೀಗಾಗಿ, ಕಲ್ಲುಗಣಿಗಾರಿಕೆ ಗುತ್ತಿಗೆ ಮಂಜೂರಾತಿಗಾಗಿ ಶಿಫಾರಸ್ಸು ಮಾಡಿದ್ದಾರೆ. ಏನೇ ಆದಾಗ್ಯೂ, ಕಲ್ಲುಗಣಿಗಾರಿಕೆ ಗುತ್ತಿಗೆಯನ್ನು ಮೇಲೆ ಹೇಳಲಾದಂತೆ ರದ್ದುಪಡಿಸಲಾಗಿದೆ.

10. ಈ ಪ್ರದೇಶ, ಸಣ್ಣ ಅರಣ್ಯ ಪ್ರದೇಶವಾಗಿರುವುದರಿಂದ ಅರಣ್ಯಯೇತರ ಚಟುವಟಿಕೆಗಳನ್ನು, ಕೇಂದ್ರ ಸರ್ಕಾರದ ಸಹಮತಿಯಿಲ್ಲದೇ ನಡೆಸಲಾಗದೆಂದು ಶ್ರೀ ವೈ.ಹೆಚ್. ವಿಜಯ್ ಕುಮಾರ್ ರವರು ಬಲವಾಗಿ ವಾದಿಸಿದ್ದಾರೆ.

11. ತನ್ನ ವಾದದ ಸಮರ್ಥನೆಯ ಸಲುವಾಗಿ ಆತನು, ಮೈಸೂರು ಅರಣ್ಯ ವಿನಿಯಮನದ (1900 ರ XI) 35ನೇ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸಿ ಮೈಸೂರು ರಾಜ ಮನೆತನದ ಸರ್ಕಾರದಿಂದ ಹೊರಡಿಸಲಾದ ಅಧಿಸೂಚನೆ ದಿನಾಂಕ ಮಾರ್ಚ್ 4, 1936 ರ ಮೇಲೆ ಅವಲಂಬಿತನಾಗಿದ್ದಾನೆ.

12. ಸದರಿ ಅಧಿಸೂಚನೆ ದಿನಾಂಕ ಮಾರ್ಚ್ 4ನ್ನು ನಾವು ಪ್ರಸ್ತಾಪಿಸುವುದಕ್ಕೆ ಮುಂಚಿತವಾಗಿ ಮೈಸೂರು ಅರಣ್ಯ ಅಧಿನಿಯವು, 1900ರ (ಸಂಕ್ಷಿಪ್ತವಾಗಿ 'ಅಧಿನಿಯಮ') 35ನೇ ಪ್ರಕರಣದ ಉಪಬಂಧಗಳನ್ನು ನಾವು ಉಲ್ಲೇಖಿಸಿದ್ದೇವೆ. ಸದರಿ ಅಧಿನಿಯಮದ 35ನೇ ಪ್ರಕರಣವು, ಜಿಲ್ಲಾ ಅರಣ್ಯ ನಿಯಮಗಳ ರಚನಾಧಿಕಾರವನ್ನು ಉದ್ದೇಶಿಸುತ್ತದೆ. ರಾಜ್ಯ ಅಥವಾ ಗ್ರಾಮ ಅರಣ್ಯವನ್ನು ಹೊರತುಪಡಿಸಿದ, ಸರ್ಕಾರದಿಂದ ವಿಲೆ ಮಾಡಿದ ಯಾವುದೇ ಭೂಮಿಯಲ್ಲಿನ ಅರಣ್ಯ ಉತ್ಪನ್ನ ಅಥವಾ ಹುಲ್ಲುಗಾವಲಿನ ಬಳಕೆಯನ್ನು ಯಾವುದೇ ಜಿಲ್ಲೆ ಅಥವಾ ಜಿಲ್ಲೆಯ ಪ್ರದೇಶದ ಭಾಗದ ಸಂಬಂಧದದಲ್ಲಿ ವಿನಿಯಮಿಸುವ ನಿಯಮಗಳನ್ನು ರಚಿಸುವುದಕ್ಕೆ ಪ್ರಾಧಿಕಾರಗಳನ್ನು ಸಶಕ್ತಗೊಳಿಸಿದೆ.

13. ಮೈಸೂರು ಅರಣ್ಯ ಅಧಿನಿಯಮ, 1900 ರಲ್ಲಿ, 'ಸಣ್ಣ ಅರಣ್ಯ' ಎಂಬ ಉಲ್ಲೇಖವಿರುವುದಿಲ್ಲವೆಂಬುದನ್ನು 2(11)ನೇ ಪ್ರಕರಣದಲ್ಲಿ 'ರಾಜ್ಯ ಅರಣ್ಯ' ವನ್ನು ಪರಿಭಾಷಿಸಲಾಗಿದೆ; 2(12) ನೇ ಪ್ರಕರಣದಲ್ಲಿ 'ಗ್ರಾಮ ಅರಣ್ಯ'ವನ್ನು ಪರಿಭಾಷಿಸಲಾಗಿದೆ ಮತ್ತು ಇಲ್ಲಿ ಗಮನಿಸಬೇಕಾಗಿರುವುದು ಹೆಚ್ಚು ಸಮಂಜಸವಾಗಿದೆ. 2(13)ನೇ ಪ್ರಕರಣದಲ್ಲಿ 'ಜಿಲ್ಲಾ ಅರಣ್ಯ'ವನ್ನು ಪರಿಭಾಷಿಸಲಾಗಿದೆ. ಸದರಿ ಅಧಿನಿಯಮದಲ್ಲಿ 'ಸಣ್ಣ ಅರಣ್ಯ'ವೆಂಬ ವಿವರಣೆಯನ್ನು ನೀಡಿರುವುದಿಲ್ಲ.

14. ಸದರಿ ಅಧಿನಿಯಮದ 35ನೇ ಪ್ರಕರಣದ (vii)ನೇ ಉಪ–ಪ್ರಕರಣದ ಅಡಿಯಲ್ಲಿ, ಸರ್ಕಾರವು, ಕಲ್ಲುಗಣಿಗಾರಿಕೆ ಅಥವಾ ಜಲ್ಲಿ ಅಥವಾ ಸುಣ್ಣ ಅಥವಾ

ಇದ್ದಿಲನ್ನು ಸುಡುವ, ಅದಿರನ್ನು ಕುದಿಸುವ ಅಥವಾ ಕಾಜನ್ನು ಕರಗಿಸುವುದನ್ನು ನಿಯಂತ್ರಿಸುವ ಅಥವಾ ನಿಷೇಧಿಸುವ ಅಧಿಕಾರ ಹೊಂದಿದೆಯೆಂಬುದನ್ನು ನಾವು, ಹೇಗೆ ಆದಾಗ್ಯೂ ಕಡ್ಡಾಯವಾಗಿ ದಾಖಲಿಸಬೇಕಿದೆ.

15. ಸದರಿ ಸರ್ವೇ ನಂಬರ್‌ನಲ್ಲಿ ಕಲ್ಲುಗಣಿಗಾರಿಕೆ ಅಥವಾ ಜಲ್ಲಿಯನ್ನು ನಿಷೇದಿಸುವ, ಯಾವುದೇ ನಿಯಮ ಅಥವಾ ವಿನಿಯಮವನ್ನು ತೋರಿಸುವಂತೆ ಶ್ರೀ ವೈ.ಹೆಚ್ ವಿಜಯ್ ಕುಮಾರ್‌ರವರನ್ನು ನಾವು ಆಹ್ವಾನಿಸಿದ್ದೇವೆ.

16. ಶ್ರೀ ಉದಯ ಹೊಳ್ಳ, ಮಾನ್ಯ ಹಿರಿಯ ವಕೀಲರು, ಅಧಿಸೂಚನೆ ದಿನಾಂಕ ಜುಲೈ 14, 1924 ರ ಅಡಿಯಲ್ಲಿ ಹೊರಡಿಸಲಾದ ಸಣ್ಣ ಅರಣ್ಯಗಳ ನಿರ್ವಹಣೆಗಾಗಿನ ನಿಯಮಗಳನ್ನು ಉಲ್ಲೇಖಿಸಿದ್ದಾರೆ. ರಾಜ್ಯ ಸರ್ಕಾರವು, ವಿಶೇಷ ಸಂರಕ್ಷಣೆಯ ಅಡಿಯಲ್ಲಿ ಗುರುತಿಸಲಾದ ಪ್ರದೇಶಗಳಲ್ಲಿ ಅರಣ್ಯ ಉತ್ಪನ್ನ ಮತ್ತು ಹುಲ್ಲುಗಾವಲನ್ನು ಉಪಯೋಗಿಸುವುದನ್ನು ವಿನಿಯಮಿಸುವುದಕ್ಕಾಗಿ ಮೈಸೂರು ಅರಣ್ಯ ಅಧಿನಿಯಮ (1990ರ XI) ರ ಪ್ರಕರಣ 35 (iii) ರ ಅಡಿಯಲ್ಲಿ ನಿಯಮಗಳನ್ನು ರಚಿಸಲಾಗಿದೆಯೆಂದಿದ್ದಾರೆ ಮತ್ತು ನಿವೇದಿಸಿದ್ದಾರೆ.

17. 'ಸಣ್ಣ ಅರಣ್ಯ' ಎಂಬುದಕ್ಕೆ ಕೆಲವು ಉಲ್ಲೇಖಗಳಿವೆ. ಅದು, ಅರಣ್ಯ ಉತ್ಪನ್ನ ಉಪಯೋಗಿಸುವುದನ್ನು ಮತ್ತು ಹುಲ್ಲುಗಾವಲನ್ನು ವಿನಿಯಮಿಸುವ ನಿಯಮವಾಗಿದೆಯೆಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ.

18. ಈ ಪ್ರದೇಶವು ಅರಣ್ಯ ಪ್ರದೇಶಕ್ಕೆ ಸೇರಿರುತ್ತದೆಂಬುದನ್ನು ತೋರಿಸುವ ಯಾವುದೇ ದಾಖಲೆಯನ್ನು ಹಾಜರುಪಡಿಸುವಂತೆ ಸರ್ಕಾರವನ್ನು ನಾವು ಮತ್ತೆ ಮತ್ತೆ ಕೋರಿದ್ದೇವೆ. ಅದು ಅರಣ್ಯ ಪ್ರದೇಶದ ಭಾಗವೆಂದು ತೋರಿಸಲು ಯಾವುದೇ ಸಾಕ್ಷ್ಯಾಧಾರಗಳು ದಾಖಲೆಯಲ್ಲಿಲ್ಲ.

19. ಶ್ರೀ ವೈ.ಹೆಚ್. ವಿಜಯ್ ಕುಮಾರ್, ತದನಂತರ, ***ವಿಭಾಗೀಯ ರೈಲ್ವೆ ವ್ಯವಸ್ಥಾಪಕರು ಮತ್ತು ಇತರರು –ವಿರುದ್ಧ– ಕರ್ನಾಟಕ ಸರ್ಕಾರ ಮತ್ತು ಇತರರು*** [1] ಪ್ರಕರಣದಲ್ಲಿ ಈ ನ್ಯಾಯಾಲಯ ವರದಿ ಮಾಡದ ತೀರ್ಮಾನದ ಕಡೆ ನಮ್ಮ ಗಮನ ಸೆಳೆದಿದ್ದಾರೆ. ಸದರಿ ತೀರ್ಮಾನದಲ್ಲಿ, ರಾಜ್ಯ ಸರ್ಕಾರವು, ಅರಣ್ಯೇತರ ಉದ್ದೇಶಕ್ಕಾಗಿ ಸದರಿ ಸರ್ವೇ ನಂಬರ್ ಭಾಗವನ್ನು ರೈಲ್ವೆ ಅಧಿಕಾರಿಗಳು ಉಪಯೋಗಿಸುವುದನ್ನು ನಿಷೇಧಿಸುವುದಕ್ಕೆ ಇಚ್ಛಿಸಿದೆ. ರೈಲ್ವೆ ಅಧಿಕಾರಿಗಳು, ಅನಧಿಕೃತವಾಗಿ ಗೂಡ್ಸ್ ಟರ್ಮಿನಲ್‌ನ್ನು ಸ್ಥಾಪಿಸಿದ್ದಾರೆ ಮತ್ತು ಕಾನೂನು ಬಾಹಿರವಾಗಿ ರೈಲ್ವೆ ಟ್ರ್ಯಾಕ್‌ಗಳನ್ನು ನಿರ್ಮಿಸಲು ಇಚ್ಛಿಸಿದ್ದಾರೆಂದು ಆಪಾದಿಸಲಾಗಿದೆ. ಸದರಿ ಸರ್ವೇ ನಂಬರ್‌ನ್ನು ಒಳಗೊಂಡಿರುವ ಆ ಭೂಮಿಯನ್ನು ಮೀಸಲು ಅರಣ್ಯವೆಂದು ಘೋಷಿಸಿಲ್ಲವಾದ ಕಾರಣ ಅದು ಅರಣ್ಯ ಪ್ರದೇಶವಲ್ಲ ಎಂದು ಸನ್ಮಾನ್ಯ ಏಕಪೀಠ ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ಸನ್ಮಾನ್ಯ ಏಕಪೀಠ ನ್ಯಾಯಾಧೀಶರ ತೀರ್ಮಾನವನ್ನು ರಿಟ್ ಅಪೀಲು ಸಂ. 3805/2009 ರಲ್ಲಿ ತೀರ್ಪು ಮತ್ತು ಆದೇಶ ದಿನಾಂಕ ಜನವರಿ 7, 2010ರ ಮೂಲಕ ವಿಭಾಗೀಯ ಪೀಠದಿಂದ ದೃಢೀಕರಿಸಲಾಗಿದೆ.

20. ಅಂಥ ಆದೇಶದ ಪುನರವಲೋಕನ ಅರ್ಜಿಯನ್ನು, ರುಜುವಾತುಪಡಿಸಲು ವಿಫಲರಾಗಿದ್ದಾರೆಂದು ನಮಗೆ ತಿಳಿದುಬಂದಿದೆ. ಅಂತಿಮವಾಗಿ, ಭಾರತ ಸಂವಿಧಾನದ 136ನೇ ಅನುಚ್ಛೇದದ ಅಡಿಯಲ್ಲಿ ವಿಶೇಷ ಅನುಮತಿ ಅರ್ಜಿಯನ್ನು ಭಾರತದ ಸರ್ವೋಚ್ಚ ನ್ಯಾಯಾಲಯವು ಸಹಾ ವಜಾಗೊಳಿಸಿದೆ.

21. ಹೀಗಾಗಿ, ನಾವು ಅದನ್ನು ಅರಣ್ಯ ಪ್ರದೇಶವೆಂದು ಎಂದೂ ಘೋಷಿಸಿಲ್ಲವೆಂದು ಸದರಿ ಸರ್ವೇ ನಂ.16 ರ ಸಂಬಂಧದಲ್ಲಿ ನ್ಯಾಯಿಕ ಘೋಷಣೆಯನ್ನು ಮಾಡಿರುತ್ತೇವೆ.

1. ರಿಟ್ ಅರ್ಜಿ ಸಂ.14649/2007, ದಿನಾಂಕ: 12ನೇ ಜೂನ್, 2009.

22. ವಿಷಯದ ಆ ದೃಷ್ಟಿಯಿಂದ, ಪುನರೀಕ್ಷಣಾ ಪ್ರಾಧಿಕಾರದ ಆದೇಶ ಅದರೊಂದಿಗೆ ಉಪನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ತುಮಕೂರು ಇವರು ದೃಢೀಕರಿಸಿದ್ದ ಆದೇಶವನ್ನು ನಾವು ರದ್ದುಗೊಳಿಸಿದ್ದೇವೆ.

23. ಆದ್ದರಿಂದ, ಸಾಮಾನ್ಯ ಕಟ್ಟಡ ಕಲ್ಲನ್ನು ತೆಗೆಯುವುದಕ್ಕಾಗಿ ಕಲ್ಲುಗಣಿ ಕಾರ್ಯಾಚರಣೆಯನ್ನು ಮುಂದುವರೆಸಲು ಈಗಾಗಲೇ ಗುತ್ತಿಗೆಯನ್ನು, ಅವರ ಹೆಸರಿನಲ್ಲಿ ಮಂಜೂರು ಮಾಡಲಾಗಿರುವುದರಿಂದ ಮತ್ತು ಗುತ್ತಿಗೆಯನ್ನು ರದ್ದುಪಡಿಸಿದ ಆದೇಶವನ್ನು ನಮ್ಮಿಂದ ರದ್ದುಗೊಳಿಸಲಾಗಿರುವುದರಿಂದ ರಿಟ್ ಅರ್ಜಿದಾರರಿಗೆ ಯಾವುದೇ ಅಡ್ಡಿಯಾಗುವುದಿಲ್ಲ.

24. ರಿಟ್ ಅರ್ಜಿಗಳನ್ನು, ಅದಕ್ಕನುಸಾರವಾಗಿ ವಿಲೆ ಮಾಡಲಾಗಿದೆ.

25. ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.

---